

ಸೀರೆಯ ಜೊತೆಗೆ ಭಾವನಾತ್ಮಕ ಸಂಬಂಧವೂ ತಳುಕು ಹಾಕಿಕೊಳ್ಳುತ್ತಿತ್ತು. ಇಂಥ ಹಳೆಯ ಸೀರೆಗಳನ್ನು ಮನೆಯ ಕಪಾಟಿನೊಳಗೆ ಭದ್ರವಾಗಿ ಇಡುವ ಪರಿಪಾಟವೂ ಹೆಣ್ಣುಮಕ್ಕಳಲ್ಲಿದೆ. ಆದರೆ ವರ್ಷ ಕಳೆದಂತೆ ಹಳೆಯ ಸೀರೆಗಳು ಬಣ್ಣಗೆಡದಿದ್ದರೂ ಹರಿದುಹೋಗುವ ಸಾಧ್ಯತೆ ಇರುತ್ತದೆ. ಇಂಥ ಸೀರೆಗಳನ್ನು ಇಂದಿನ ಫ್ಯಾಷನ್‌ಗೆ ತಕ್ಕ ಹಾಗೆ ಸಲ್ವಾರ್, ಲೆಹೆಂಗಾ, ಕುರ್ತಾ ಹೀಗೆ ಯಾವುದಾದರೂ ಬಗೆಯ ಉಡುಪನ್ನು ಹೊಲಿಸಿ ಧರಿಸಬಹುದು. ಈ ಸೀರೆಯ ಬಾರ್ಡರ್‌ಗಳನ್ನು ಬೇರೆ ಉಡುಗೆಗಳಿಗೆ ಮ್ಯಾಚಿಂಗ್ ಮಾಡಿ ಹೊಲಿಸಿಕೊಳ್ಳಬಹುದು.

## ಬನಾರಸ್ ಲೆಹೆಂಗಾ

ವಸ್ತ್ರ ವಿನ್ಯಾಸಕಾರರು ಬನಾರಸ್ ಸೀರೆಗಳಲ್ಲಿ ಲಂಗಗಳ ಬದಲಿಗೆ ಮಾಡರ್ನ್ ಲುಕ್ ನೀಡುವ ಲೆಹೆಂಗಾಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಟ್ಟಿದ್ದಾರೆ. ಅದು ಇದೀಗ ಭಾರೀ ಟ್ರೆಂಡಿಂಗ್‌ನಲ್ಲಿದೆ. ಗ್ರಾಹಕರ ಮನಸ್ಸಿಗೆ ಹಾಗೂ ಅಭಿರುಚಿಗೆ ಅನುಗುಣವಾಗಿ ಈ ತರಹದ ಸೀರೆಗಳಲ್ಲಿ ಇನ್ನೂ ವೈವಿಧ್ಯಮಯ ಉಡುಗೆಗಳನ್ನು ಹೊಲಿಸಿ ತೊಡಬಹುದು. ಸೀರೆಯಲ್ಲಿರುವ ಸುಂದರ ಚಿತ್ತಾರವನ್ನೇ ಉಪಯೋಗಿಸಿ ಸಲ್ವಾರ್ ಹೊಲಿಸಿಕೊಳ್ಳಬಹುದು, ಬನಾರಸ್ ಸೀರೆ ಗ್ರ್ಯಾಂಡ್ ಲುಕ್ ಕೊಡುವುದರಿಂದ ಇದರಿಂದ ಯಾವ ರೀತಿಯ ಉಡುಪನ್ನಾದರೂ ತಯಾರಿಸಿ ಬಳಸಬಹುದು.

ಸಿಂಪಲ್ಲಾಗಿ ಇರಲು ಬಯಸುವವರು, ಈ ಸೀರೆಯ ಕೆಲ ಭಾಗಗಳನ್ನು ಕತ್ತರಿಸಿ ಸಿಂಪಲ್ ಅಥವಾ ಪ್ಲೇನ್ ಸೀರೆಗೆ ಹೊಂದಿಸಿ ಬಳಸಬಹುದು. ಇನ್ನುಳಿದ ಬಟ್ಟೆಯನ್ನು ಬೆನ್ನಿನ ಭಾಗಕ್ಕೆ, ತೋಳುಗಳ ಭಾಗಕ್ಕೆ ಬರುವಂತೆ ಮಾಡಿ ಆಕರ್ಷಕವಾದ ಕುರ್ತಾ ಹೊಲಿಸಿಕೊಳ್ಳಬಹುದು. ಪ್ಲೇನ್ ಸೀರೆ ಮೇಲೆ ಬನಾರಸ್ ರೇಷ್ಮೆ ಬಟ್ಟೆಯ ಬ್ಲೌಸ್ ಕೂಡ ಬಳಸುವುದು ಟ್ರೆಂಡಿಯಾಗಿದೆ.

## ಜಾಕೆಟ್‌ಗೂ ಸೈ

ಬನಾರಸ್ ಸೀರೆಯನ್ನು ಬಳಸಿ ತರಹೇವಾರಿ ಜಾಕೆಟ್‌ಗಳನ್ನು ಹೊಲಿಸಿಕೊಳ್ಳಬಹುದು. ಇದೂ ಟ್ರೆಂಡಿಯಾಗಿದ್ದು, ಕುರ್ತಾ ಮತ್ತು ಪಲಾಜೊ ಜೊತೆಗೆ ಧರಿಸಬಹುದು. ಕಡುಬಣ್ಣದ ಲಾಂಗ್ ಬನಾರಸ್ ಜಾಕೆಟ್‌ಗಳು ಈಗ ಹೆಚ್ಚಿನ ಬೇಡಿಕೆ ಪಡೆದಿವೆ. ಹಾಗೆಯೇ ಪಟಿಯಾಲಾ ಪ್ಯಾಂಟ್‌ಗಳ ಜೊತೆ ಬನಾರಸ್ ಶಾರ್ಟ್ ಕುರ್ತಿಗಳು ಯುವತಿಯರ ಹಾಟ್ ಫೇವರೆಟ್ ಎಂದೇ ಹೇಳಬಹುದು. ಸೆಲೆಬ್ರಿಟಿಗಳಿಂದ ಪ್ರಾರಂಭವಾದ ಈ ಟ್ರೆಂಡ್ ಇದೀಗ ಸಾಮಾನ್ಯರನ್ನೂ ತಲುಪಿದೆ.

ಮಾಡರ್ನ್ ಉಡುಪುಗಳಾದ ಸ್ಕರ್ಟ್, ಗೌನ್ ಹಾಗೂ ಫ್ರಾಕ್‌ಗಳೂ ಇದೀಗ ಬನಾರಸ್ ಬಟ್ಟೆಯಿಂದಲೇ ತಯಾರಿಸಲಾಗುತ್ತಿದೆ. ರಾಯಲ್ ಲುಕ್ ನೀಡುವ ಬನಾರಸಿ ಗೌನ್‌ಗಳು ಮದುವೆ ಸಮಾರಂಭಕ್ಕೆ ಹೇಳಿ ಮಾಡಿಸಿದ ಉಡುಪು ಎಂತಲೇ ಹೇಳಬಹುದು. ಇನ್ನು ಬನಾನಾ ಕಟ್‌ನೊಂದಿಗೆ ವಿನ್ಯಾಸಗೊಂಡ ಬನಾರಸಿ ಸ್ಕರ್ಟ್ ಕಚೇರಿ ಹಾಗೂ ಸಣ್ಣ ಪುಟ್ಟ ಕಾರ್ಯಕ್ರಮಗಳಿಗೆ ಅತ್ಯಂತ ಸೂಕ್ತವಾಗಿದೆ. ನೋಡಲು ವೆಸ್ಟರ್ನ್ ಟಚ್ ಇರುವ ಈ ಬ್ರೊಕೇಡ್ ಬನಾರಸಿ ಲಾಂಗ್ ಸ್ಕರ್ಟ್ ರಾಯಲ್ ಲುಕ್ ನೀಡುತ್ತದೆ. ಈ ಸ್ಕರ್ಟ್‌ಗಳ ಮೇಲೆ ಕಾಂಟ್ರಾಸ್ಟ್ ಟಾಪ್‌ಗಳನ್ನು ಧರಿಸಬಹುದು. ಚಿಕ್ಕ ಮಕ್ಕಳ ಫ್ರಾಕ್ಸ್, ಸ್ಕರ್ಟ್, ಜಾಕೆಟ್ ಕೂಡ ಇದೀಗ ಬನಾರಸಿ ಬಟ್ಟೆಯಲ್ಲೇ ತಯಾರಿಸಲಾಗುತ್ತಿದೆ.

## ಮದುಮಗನಿಗೆ ಕುರ್ತಾ



ಇದೀಗ ಯುವಕರು ಕೂಡ ಈ ಬನಾರಸ್ ಫ್ಯಾಷನ್‌ಗೆ ಮೊರೆಹೋಗಿದ್ದಾರೆ. ಮದುವೆ ಹಾಗೂ ಇನ್ನಿತರ ಶುಭ ಸಮಾರಂಭಗಳಲ್ಲಿ ಮದುಮಗ ಹಾಗೂ ಅವನ ಗೆಳೆಯರು ಕೂಡ ಪೈಜಾಮ ಜೊತೆ ಬನಾರಸ್ ಸಿಲ್ಕ್ ಕುರ್ತಾ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ. ಬನಾರಸಿ ಉಡುಪು ಎಲ್ಲಾ ವಯೋಮಾನದವರಿಗೂ ಹೊಂದಿಕೊಳ್ಳುವಂಥ ಬಟ್ಟೆ. ಈ ಕಾರಣದಿಂದ ಈ ಬಟ್ಟೆಯಲ್ಲಿ ಯಾವುದೇ ತರಹದ ಉಡುಪು ಹೊಲಿಸಿಕೊಂಡರೂ ಅದು ಟ್ರೆಂಡಿ ಹಾಗೂ ರಾಯಲ್ ಲುಕ್ ನೀಡುವುದಂತೂ ಖಂಡಿತ.